# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 388 |
| ಉತ್ತರಿಸಬೇಕಾಗಿದ್ದ ದಿನಾಂಕ | : 17.07.2019 |
| ಸದಸ್ಯರ ಹೆಸರು | : ಶ್ರೀ ರಘುನಾಥ್ ರಾವ್ ಮಲ್ಕಾಪೂರೆ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : ಪ್ರವಾಸೋದ್ಯಮ ಮತ್ತು ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ಜಿಲ್ಲೆಯಲ್ಲಿರುವ ಜಿಲ್ಲಾ ಹಾಗೂ ತಾಲ್ಲೂಕು ಕ್ರೀಡಾಂಗಣಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು) | ಬೀದರ್ ಜಿಲ್ಲೆಯ ಬೀದರ್ ನಲ್ಲಿ ಒಂದು ಜಿಲ್ಲಾ ಕ್ರೀಡಾಂಗಣ ಹಾಗೂ ಔರಾದ್, ಬಸವಕಲ್ಯಾಣ ಮತ್ತು ಹುಮ್ನಾಬಾದ್ ಗಳಲ್ಲಿ ತಲಾ ಒಂದು ತಾಲ್ಲೂಕು ಕ್ರೀಡಾಂಗಣಗಳನ್ನು ನಿರ್ಮಿಸಲಾಗಿದೆ. ಭಾಲ್ಕಿಯಲ್ಲಿ ಸೂಕ್ತ ನಿವೇಶನ ಲಭ್ಯವಾಗದ ಹಿನ್ನೆಲೆಯಲ್ಲಿ ತಾಲ್ಲೂಕು ಕ್ರೀಡಾಂಗಣವನ್ನು ನಿರ್ಮಿಸಲಾಗಿರುವುದಿಲ್ಲ. ಭಾಲ್ಕಿಯಲ್ಲಿ ಒಂದು ಒಳಾಂಗಣ ಕ್ರೀಡಾ ಹಾಲ್ ನಿರ್ಮಿಸಲಾಗಿದೆ. |
| ಆ) | ಪ್ರಸಕ್ತ ಸಾಲಿನಲ್ಲಿ ಹೊಸದಾಗಿ ಎಷ್ಟು ಜಿಲ್ಲಾ ಹಾಗೂ ತಾಲ್ಲೂಕು ಕ್ರೀಡಾಂಗಣಗಳು ಮಂಜೂರಾಗಿವೆ; ಅವುಗಳಿಗೆ ಈವರೆಗೆ ನೀಡಲಾಗಿರುವ ಅನುದಾನವೆಷ್ಟು; (ವಿವರ ನೀಡುವುದು) | 2019-20 ನೇ ಸಾಲಿನಲ್ಲಿ ಹೊಸದಾಗಿ ಯಾವುದೇ ಹೊಸ ತಾಲ್ಲೂಕು ಅಥವಾ ಜಿಲ್ಲಾ ಕ್ರೀಡಾಂಗಣಗಳು ಮಂಜೂರಾಗಿರುವುದಿಲ್ಲ. |
| ಇ) | ಜಿಲ್ಲೆಯ ಕ್ರೀಡಾಪಟುಗಳಿಗೆ ಅವರವರ ಕ್ರೀಡಾ ಕ್ಷೇತ್ರದಲ್ಲಿ ಬೆಳೆಯಲು ಸರ್ಕಾರ ಕ್ರೀಡಾ ಪಾಲಿಸಿ ಯೋಜನೆಯನ್ನು ಹಾಕಿಕೊಂಡಿದೆಯೇ; (ವಿವರ ನೀಡುವುದು) | ಕ್ರೀಡಾಪಟುಗಳ ಸರ್ವತೋಮುಖ ಬೆಳವಣಿಗೆಗಾಗಿ ಸರ್ಕಾರವು ಕರ್ನಾಟಕ ರಾಜ್ಯ ಕ್ರೀಡಾ ನೀತಿಯನ್ನು ರೂಪಿಸಿ, ಸರ್ಕಾರದ ಆದೇಶ ಸಂಖ್ಯೆ: ಯುಸೇಇ 165 ಯುಸೇಕ್ರೀ 2017, ದಿನಾಂಕ: 14.03.2018 ರನ್ವಯ ಜಾರಿಗೆ ತರಲಾಗಿದೆ. ಬೀದರ್ ಪಟ್ಟಣದಲ್ಲಿ ಹೊರಾಂಗಣ ಕ್ರೀಡಾಂಗಣ, ಈಜುಕೊಳ, ಒಳಾಂಗಣ ಕ್ರೀಡಾಂಗಣಗಳನ್ನು ಕ್ರೀಡಾಪಟುಗಳ ಬಳಕೆಗಾಗಿ ಒದಗಿಸಲಾಗಿದೆ. ಅದೇ ರೀತಿ, ಬಸವಕಲ್ಯಾಣ, ಔರಾದ್ ಮತ್ತು ಹುಮ್ನಾಬಾದ್ ಗಳಲ್ಲಿ ತಾಲ್ಲೂಕು ಕ್ರೀಡಾಂಗಣಗಳನ್ನು ನಿರ್ಮಿಸಲಾಗಿದ್ದು, ಕ್ರೀಡಾಪಟುಗಳು ಬಳಕೆ ಮಾಡುತ್ತಿದ್ದಾರೆ. ಯುವ ಸಂಘಗಳಿಗೆ ವಿವಿಧ ಕಾರ್ಯಕ್ರಮಗಳಡಿ ಕ್ರೀಡಾ ಕಿಟ್ ಗಳನ್ನು ಒದಗಿಸಲಾಗುತ್ತಿದೆ ಹಾಗೂ ಕ್ರೀಡಾಕೂಟಗಳಲ್ಲಿ ಭಾಗವಹಿಸಲು ಉತ್ತೇಜಿಸಲಾಗುತ್ತಿದೆ. |

| | | |
|---|---|---|
| ಈ) | ಬೀದರ ತಾಲ್ಲೂಕಿನಲ್ಲಿ ಇದುವರೆಗೂ ತಾಲ್ಲೂಕು ಕ್ರೀಡಾಂಗಣ ಮಂಜೂರು ಮಾಡದಿರಲು ಕಾರಣಗಳೇನು; ಪ್ರಸಕ್ತ ಸಾಲಿನಲ್ಲಿ ಮಂಜೂರು ಮಾಡಲಾಗುವುದೇ? | ಬೀದರ ತಾಲ್ಲೂಕು ಕೇಂದ್ರವಾಗಿರುವ ಬೀದರ್ ಪಟ್ಟಣವು ಬೀದರ್ ಜಿಲ್ಲಾ ಕೇಂದ್ರವಾಗಿರುವ ಹಿನ್ನೆಲೆಯಲ್ಲಿ ಜಿಲ್ಲಾ ಕ್ರೀಡಾಂಗಣವನ್ನು ನಿರ್ಮಿಸಲಾಗಿದೆ. ಆದುದರಿಂದ, ಪ್ರತ್ಯೇಕವಾಗಿ ತಾಲ್ಲೂಕು ಕ್ರೀಡಾಂಗಣ ನಿರ್ಮಿಸುವ ಪ್ರಸ್ತಾವನೆ ಪ್ರಸ್ತುತ ಇರುವುದಿಲ್ಲ. |

ವೈಎಸ್ ಡಿ/ಇಪಿಇ/15/2019

(ಸಿ. ಟಿ. ರವಿ)

ಪ್ರವಾಸೋದ್ಯಮ ಮತ್ತು ಕನ್ನಡ ಮತ್ತು ಸಂಸ್ಕೃತಿ
ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು.

ಪ್ರವಾಸೋದ್ಯಮ ಮತ್ತು ಕನ್ನಡ ಮತ್ತು ಸಂಸ್ಕೃತಿ
ಯುವ ಸಬಲೀಕ[illegible] ಕ್ರೀಡಾ ಹಾಗೂ
ಚಿಕ್ಕಮಗಳೂರು ಜಿಲ್ಲಾ ಉಸ್ತುವಾರಿ ಸಚಿವರು